44ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಸಿ.ಸಿ. ನಂಃ 16164 /2015 ಚಾ.ಸಾ. 6
ಪ್ರಾ.ಸಾ. 2

| | |
|---|---|
| ಸಾಕ್ಷಿಯ ಹೆಸರು | ನಾಗೇಶ್ |
| ತಂದೆಯ ಹೆಸರು | ಆರ್ ಜಿ ನಾರಾಯಣ ಶೆಟ್ಟಿ |
| ವಯಸ್ಸು | 51 ವರ್ಷ |
| ಉದ್ಯೋಗ | ವ್ಯಾಪಾರ |
| ವಿಳಾಸ | ಕನಕಪುರ |

ಸಾಕ್ಷಿಯನ್ನು ಈ ದಿವಸ ದಿನಾಂಕಃ 02-03-2016 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆ ಃ ಸ.ಸ.ಅ.

ಸಾಕ್ಷಿಗೆ ಪ್ರಸ್ತುತ ದಿಃ30-1-2015ರ ಅಮಾನತ್ತು ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದುದರಿಂದ ಅದನ್ನು ನಿಶಾನೆ ಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3ಎ ಎಂದು ಗುರುತಿಸಲಾಯಿತು. ದಿಃ30-1-2015ರಂದು ಜೆಪಿ ನಗರ ಪೋಲಿಸ್‌ನವರು ಕನಕಪುರದ ಎಂ.ಜಿ.ರಸ್ತೆಯಲ್ಲಿರುವ ಸಪ್ತಗಿರಿ ಜ್ಯೂವೆಲ್ಸ್ ಹತ್ತಿರ ಆರೋಪಿಗಳನ್ನು ಕರೆದುಕೊಂಡು ಬಂದಿದ್ದರು. ಆಗ ನಾನು ಅಂಗಡಿಗೆ ಹೋಗಿದ್ದರಿಂದ ನನ್ನ ಸಹಿ

ಪಡೆದುಕೊಂಡಿದ್ದಾರೆ. ನಿಪಿ-3ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ಆರೋಪಿಗಳನ್ನು ನೋಡಿದರೆ ನನಗೆ ಗುರುತಿಸಲು ಅಗುವುದಿಲ್ಲ ಎಂದು ಸಾಕ್ಷಿ ಆರೋಪಿಗಳನ್ನು ಗುರುತಿಸುವುದಿಲ್ಲ ಎಂದು ಹೇಳಿರುತ್ತಾರೆ. ನನ್ನ ಸಮಕ್ಷಮ ಪೋಲಿಸ್‌ನವರು ಯಾವುದೇ ಆಭರಣಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಸಂಬಂಧ ನಾನು ಪೋಲಿಸ್‌ನವರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಸಮಯದಲ್ಲಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಸ.ಸ.ಅ ರವರು ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟಿ ಸವಾಲುಃ ಸ.ಸ.ಅ. ರವರಿಂದಃ

ದಿಃ30-1-2015ರಂದು ಜೆಪಿ ನಗರ ಪೋಲಿಸ್ ಠಾಣೆಯ ಸಪ್ತಗಿರಿ ಜ್ಯೂವೆಲ್ಸ್ ಅಂಗಡಿಯ ಬಳಿ ಬಂದು ನನ್ನ ಸಮಕ್ಷಮ ನಿಶಾನೆ ಪಿ-3ರಂತೆ ಮಾಲು ಅಮಾನತ್ತು ಪಂಚನಾಮೆಯನ್ನು ಜರುಗಿಸಿದ್ದಾರೆ ಎನ್ನುವುದು ಸರಿಯಲ್ಲ ಹಾಗೂ ನನ್ನ ಸಮಕ್ಷಮ ಒಡವೆಗಳನ್ನು 40 ಗ್ರಾಂ ತೂಕದ ಅಮಾನತ್ತು ಪಡಿಸಿಕೊಂಡರು ಎನ್ನುವುದು ಸರಿಯಲ್ಲ. ದಿಃ30-1-2015ರಂದು ಬೆಂಗಳೂರಿನ ಜೆಪಿನಗರ ಪೋಲಿಸ್ ಠಾಣೆಯ ------ ಆರೋಪಿಗಳನ್ನು ಮತ್ತು ಚಿನ್ನದ ಚೈನ್‌ಗಳನ್ನು ನೋಡಿರುತ್ತೇನೆ ಹಾಗೂ ಪುನಃ ನೋಡಿದರೆ ಗುರುತಿಸುತ್ತೇನೆ ಎಂದು

ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ಅಭಿಯೋಜನೆಯ ಪರವಾಗಿ ನಿಶಾನೆ ಪಿ-4 ಎಂದು ಗುರುತಿಸಲಾಯಿತು. ನಾನು ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ ಇಲ್ಲ

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

44ನೇ ಅ.ಮು.ಮ.ದಂ. ಬೆಂಗಳೂರು.